ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ
ಕ್ರಿಮಿನಲ್ ಕೇಸ್ ನಂ.7018/2022

ಸಿ.ಡಬ್ಲೂಃ3 ಪಿ.ಡಬ್ಲೂಃ3

ಸಾಕ್ಷಿಗೆ ದಿನಾಂಕ ಃ18/08/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಹಣಮಂತ್ರಾಯ |
| ತಂ/ಗಂ. ಹೆಸರು | ಮಡಿವಾಳಪ್ಪ ಕನ್ನೂರ |
| ವಯಸ್ಸು | 58 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ನಿವಾಳಖೇಡ |

ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ

ನಾನು ಅಂದಾಜು 1 ವರ್ಷಗಳ ಹಿಂದೆ ನಿವಾಳಖೇಡದಿಂದ ವಿಜಯಪೂರಕ್ಕೆ ಬಂದು ಮರಳಿ ವಿಜಯಪೂರದಿಂದ ದೇವರ ಹಿಪ್ಪರಗಿ ಬಸ್ ನಿಲ್ದಾಣದಿಂದ ಆಚೆ ಬರುತ್ತಿದ್ದಾಗ ಒಂದು ವಾಹನ ಚಾ ಸಾ 4 ರವರರಿಗೆ ಬಂದು ಹಾಯಿತು. ನಂತರ ಆ್ಯಂಬುಲೇನ್ಸ್ ಪೋನ್ ಮಾಡಿ ನಂತರ ಅವರು ಬಂದು ಗಾಯಾಳುವನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಬಂದು ಹಾಯಿಸಿದ ಗಾಡಿ ಬಿಳಿ ಬಣ್ಣದ ಕಾರು ಇತ್ತು. ಚಾ ಸಾ 4 ಒಂದು ಬದಿಯಿಂದ ಹೊಗುತ್ತಿದ್ದ ಕಾರ ಚಾಲಕ ಬಂದು ಅಪಘಾತಪಡಿಸಿರುತ್ತಾನೆ. ಇದು ಆದ ನಂತರ ಪೋಲಿಸರು ನನಗೆ ಎಲ್ಲಿಯು ಕರೆಸಿಲ್ಲ.ಪೋಲಿಸರು 5-6 ದಿನಗಳ ನಂತರ ದೇವರ ಹಿಪ್ಪರಗಿ ಠಾಣೆಗೆ ಕರೆಸಿದ್ದರು. ಅಲ್ಲಿ ನನ್ನ ಸಹಿಗಳನ್ನು ಪಡೆದಿರುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಲಾಗಿ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿ ನಿಪಿ. 2 ಸಿ ಎಂದು ಗುರುತಿಸಲಾಯಿತು. ನನ್ನ ಜೊತೆ ಚಾ ಸಾ 1 ಮತ್ತು2 ರವರು ನಿಂತಿರುತ್ತಾರೆ ಎಂದು ಹೇಳುತ್ತಾರೆ. ವಾಹನ ಜಪ್ತುಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 4 ಎಂದು ಗುರುತಿಸಲಾಗಿದೆ, ಸಹಿ ನಿಪಿ. 4 ಸಿ ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಎ.ಪಿ.ಪಿ. ಯವರಿಂದ

ದಿನಾಂಕ 27-08-2022 ರಂದು ಪೋಲಿಸರು ನನಗೆ ಗುನ್ಹಾ ಜಾಗೆಯ ಪಂಚನಾಮೆ ಮಾಡಲು ಕರೆಸಿದ್ದರು ಎಂದರೆ ನಿಜ. ನನ್ನ ಮತ್ತು ಚಾ ಸಾ 2 ಹಾಗೂ ಚಾ ಸಾ 1 ರವರು ತೋರಿಸಿದಸ್ಥಳದಲ್ಲಿ ಅಪಘಾತ

ಸ್ಥಳದ ಪಂಚನಾಮೆ ಮಾಡಿರುತ್ತಾರೆ ಎಂದರೆ ನಿಜ. ನಿಪಿ. 2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸಂಜೆ 5.00 ರಿಂದ 6 ಗಂಟೆಯವರೆಗೆ ನನ್ನ ಸಮಕ್ಷಮ ಪಂಚನಾಮೆ ಮಾಡಿ ಸ್ಥಳದಲ್ಲಿ ನನ್ನ ಸಹಿ ಪಡೆದಿರತ್ತಾರೆ ಎಂದರೆ ನಿಜ. ನಂತರ ಭಾವ ಚಿತ್ರ ತೆಗೆದಿರುತ್ತಾರೆ ಎಂದರೆ ನಿಜ. ನಂತರ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ನನ್ನ ಸಮಕ್ಷಮ ವಾಹನ ಜಪ್ತು ಪಂಚನಾಮೆ ಮಾಡಿರುತ್ತಾರೆ ಎಂದರೆ ನಿಜ. ಸದರಿ ಜಪ್ತುಪಂಚನಾಮೆ ಸಂಜೆ 6.30 ರಿಂದ 7.30 ರವರೆಗೆ ಪಂಚನಾಮೆ ಮಾಡಿ ಸಹಿ ಪಡೆದಿರುತ್ತಾರೆ ಎಂದರೆ ನಿಜ.

<u>ಪಾಟೀ ಸವಾಲು ಶ್ರೀ ಬಿ ಜಿ ಎನ್ ವಕೀಲರಿಂದ</u>

ನಾನು ನೋಡಿದಾಗ ಚಾ ಸಾ 4 ಪೂರ್ವ ದಿಕ್ಕಿಗೆ ನಿಂತಿದ್ದ. ವಾಹನ ವಿಜಯಪೂರದಿಂದ ಸಿಂದಗಿ ಕಡೆಗೆ ಹೋಗುತ್ತಿತ್ತು. ಚಾ ಸಾ 4 ಓಡಿ ಹೋಗುವಾಗ ತನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಬಸ್ ನಿಲ್ದಾಣ ಹತ್ತಿರ ಜನ ದಟ್ಟಣೆ ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ವಾಹನಗಳು ಜನ ದಟ್ಟಣೆ ಇರುವ ಕಾರಣ ನಿಧಾನವಾಗಿ ಹೋಗುತ್ತವೆ ಎಂದರೆ ಸರಿಯಲ್ಲ. ಚಾ ಸಾ 4 ನನ್ನ ಅಣ್ಣನ ಮಗ. ಚಾ ಸಾ 4 ರವರಿಗೆ ವಿಮೆ ಪರಿಹಾರ ವಿಮೆ ಪರಿಹಾರ ಒದಗಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಇದ್ದಿರಲಿಲ್ಲ ಚಾ ಸಾ 4 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ः ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ